# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್- ಸಂಖ್ಯೆ 129ರಲ್ಲಿ ದಿನಾಂಕ: 07.11.2020 ರಂದು, ನಡೆದ ವಾರ್ಡ್ ಕಮಿಟಿ ಸಭೆಯ ಸಭಾ ನಡವಳಿಗಳು

ದಿನಾಂಕ: 07.11.2020ರಂದು ವಾರ್ಡ್ ಸಂಖ್ಯೆ 129ರ ನವೆಂಬರ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಹಾಜರಿದ್ದ ಸದಸ್ಯರು:-

1. ಶ್ರೀ ವಿಶ್ವನಾಥ್, ಅಧೀಕ್ಷಕ ಅಭಿಯಂತರರು ದಾಸರಹಳ್ಳಿ ವಲಯ ಹಾಗೂ ವರ್ಡ್ ಸಂಖ್ಯೆ-129ರ ನೋಡಲ್ ಅಧಿಕಾರಿಗಳು.
2. ಎಸ್.ವಸಂತ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ)
3. ಶ್ರೀಮತಿ ಅನಿತಾ ರಾಜ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-129.
4. ಚಂದ್ರಕಾಂತ್, ಕಿರಿಯ ಅಭಿಯಂತರರು (ಬೆಸ್ಕಾಂ).
5. ಶ್ರೀ ಹನುಮಂತರಾಜು, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
6. ಭರತ್, ಸಹಾಯಕ ಅಭಿಯಂತರರು (ವಿದ್ಯುತ್)
7. ಶ್ರೀನಿವಾಸ್ ರಾವ್ ಪಿ ಮಾರ್ಷಲ್ ವಾರ್ಡ್-129.
8. ಡಿ.ವೈ ದೇವ್ಪೂರ್ ಸದಸ್ಯರು, ಸ್ಥಳೀಯ ವೆಲ್‌ಫೇರ್ ಅಸೋಸಿಯೇಶನ್ 14ನೇ ಬ್ಲಾಕ್, ಅನ್ನಪೂರ್ಣೇಶ್ವರಿ ನಗರ.
9. ಎಸ್.ಕೆ. ಭಟ್ ಅಧ್ಯಕ್ಷರು, ಸ್ಥಳೀಯ ವೆಲ್‌ಫೇರ್ ಅಸೋಸಿಯೇಶನ್ 14ನೇ ಬ್ಲಾಕ್, ಅನ್ನಪೂರ್ಣೇಶ್ವರಿ ನಗರ.
10. ಸತ್ಯನಾರಾಯಣ್, ಎನ್.ಜಿ.ಇ.ಎಫ್ ಬಡಾವಣೆ ನಿವಾಸಿ
11. ಮಂಜುನಾಥ್ ಹೆಚ್.ಎಸ್. ಜಿಯಾಲಜಿ ಬಡಾವಣೆ ನಿವಾಸಿ
12. ಬಿ.ಜಿ. ಚನ್ನಿಗಯ್ಯ ಜಿಯಾಲಜಿ ಬಡಾವಣೆ ನಿವಾಸಿ

ವಾರ್ಡ್ ಸಂಖ್ಯೆ-129ರ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು.

## ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಹಿಂದಿನ ಸಭೆಯಲ್ಲಿ ಚರ್ಚಿಸಲಾದ/ದೂರುಗಳ ಬಗ್ಗೆ ಸಂಬಂಧಪಟ್ಟವರೊಂದಿಗೆ ಚರ್ಚಿಸಲಾಗಿ.

- ಎನ್‌ಜಿ.ಇ.ಎಫ್ ಬಡಾವಣೆಗಳು ಆರ್.ಡಬ್ಲ್ಯೂ.ಎ ಅಧ್ಯಕ್ಷರಾದ ಶ್ರೀ ರಾಮಣ್ಣ ರವರು ನೀಡಿದ ದೂರಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮದ ಬಗ್ಗೆ ಉಪಸ್ಥಿತರಿದ್ದ ವಾರ್ಡ್ ಸಹಾಯಕ ಅಭಿಯಂತರವರನ್ನು ವಿಚರಿಸಲಾಗಿ ಮಲ್ಲತ್ತಹಳ್ಳಿ ಪ್ರದೇಶವು 1ನೇ ಸಿ.ಡಿ & 3ನೇ ಅಡ್ಡರಸ್ತೆ, ಮತ್ತು ಸುತ್ತಮುತ್ತಲಿನ ಪ್ರದೇಶವು ತಗ್ಗು ಪ್ರದೇಶವಾಗಿದ್ದು, ಈ ಹಿಂದೆ ಸಿದ್ವಿನ್ ಬಹುಮಹಡಿ ಕಟ್ಟಡ ನಿರ್ಮಾಣಕ್ಕೆ ಮುಂಚೆ ಸದರಿ ಪ್ರದೇಶದಲ್ಲಿ ಪ್ರವಾಹವಾಗುತ್ತಿರುವುದಿಲ್ಲವೆಂದು ಹಾಗೂ ಸದರಿ ಬಹುಮಹಡಿ ಕಟ್ಟಡ ಬಂದ ನಂತರ ಸಮರ್ಪಕವಾಗಿ ನೀರು ಹರಿಯಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಈ ಸಂಬಂಧ ಈಗಾಗಲೇ ತಜ್ಞರಿಂದ ವರದಿ ಪಡೆದಿದ್ದು, ಅದರಂತೆ ಕ್ರಮ ವಹಿಸಲು ಮುಖ್ಯ ಅಭಿಯಂತರರು (ರಾ.ರಾ.ನಗರ) ಕಾ.ಪಾ.ಅ/ರಾ.ರಾ.ನಗರ ರವರಿಂದ ಕ್ರಮ ವಹಿಸುತ್ತಿರುವ ಬಗ್ಗೆ ತಿಳಿಸಿದರು ಪ್ರತಿಕ್ರಿಯೆಯಾಗಿ ಸಭೆಯಲ್ಲಿ ಉಪಸ್ಥಿತರಿದ್ದ ಎನ್‌ಜಿಇಎಫ್ ಬಡಾವಣೆಯ ಅಧ್ಯಕ್ಷರಾದ ಶ್ರೀ ರಾಮಣ್ಣ ಮತ್ತು ಸದಸ್ಯರಾದ ಶ್ರೀ ಸತ್ಯನಾರಾಯಣ್ ರವರು ಸದರಿ ದೂರಿನ ಅರ್ಜಿಯನ್ನು ನೀಡಿ ಈಗಾಗಲೇ ಒಂದು ವರ್ಷ ಮುಟ್ಟಿರುವುದರಿಂದ ಸದರಿ ಅರ್ಜಿಗೆ ಸಂಬಂಧ ಕೈಗೊಂಡ ಕ್ರಮದ ಬಗ್ಗೆ ಹಿಂಬರಹವನ್ನು ನೀಡಲು ಸಂಬಂಧಿಸಿದರವರಿಗೆ ಸೂಚಿಸಬೇಕೆಂದು ಕೋರಿರುತ್ತಾರೆ. ಸದರಿಯವರು ಕೋರಿರುವಂತೆ ಹಿಂಬರಹವನ್ನು ನೀಡಲು ಕಾ.ಪಾ.ಅ/ಸ.ಕಾ.ನಿ.ಅ ರವರಿಗೆ ತಿಳಿಸಲು ವಾರ್ಡ್ ಸಭೆಯ ಅಧ್ಯಕ್ಷರಿಗೆ ಸೂಚಿಸಲಾಯಿತು.

  ಕ್ರಮ: ಸಹಾಯಕ ಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರರು/ಕಾರ್ಯಪಾಲಕ ಅಭಿಯಂತರರು (ರಾ.ರಾ. ನಗರ).

- ಈ ಹಿಂದಿನ ಸಭೆಯಲ್ಲಿ ಎನ್.ಜಿ.ಇ.ಎಫ್ ಬಡಾವಣೆಯ ಅಡ್ಡರಸ್ತೆಯಲ್ಲಿ ಕೆಲವು ರಸ್ತೆಗಳಲ್ಲಿ ಬೀದಿ ದೀಪಗಳು ಬೆಳಗುತ್ತಿಲ್ಲವೆಂದು ದೂರಿದ್ದರ ದೂರಿನನ್ವಯ ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ಸಹಾಯಕ ಅಭಿಯಂತರರು (ವಿದ್ಯುತ್) ಶ್ರೀ ಭರತ್‌ರವರು ಪರಿಶೀಲಿಸಿ ಕ್ರಮ ಕೈಗೊಂಡಿರುವುದಾಗಿ ತಿಳಿಸಿದ್ದು, ಅದರಂತೆ ಸರಿಪಡಿಸಿರುತ್ತಾರೆ ಎಂದು ಉಪಸ್ಥಿತರಿದ್ದ ಸದಸ್ಯರು ತಿಳಿಸಿರುತ್ತಾರೆ.

- ಘನತ್ಯಾಜ್ಯ ವಿಭಾಗಕ್ಕೆ ನೀಡಿದ್ದ ದೂರಿನ ಸಂಬಂದ ಕೈಗೊಂಡ ಕ್ರಮದ ಬಗ್ಗೆ ಉಪಸ್ಥಿತರಿದ್ದ, ಕಿರಿಯ ಆರೋಗ್ಯ ಪರಿವೀಕ್ಷಕರು/ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರನ್ನು ವಿಚಾರಿಸಲಾಗಿ ಸದರಿ ವಾರ್ಡ್‌ನಲ್ಲಿ ಹೊಸದಾಗಿ ಮನೆ ಮನೆಯಿಂದ ತ್ಯಾಜ್ಯ ಸಂಗ್ರಹಣೆ /ವಿಲೇವಾರಿಗೆ ಸಂಬಂಧಿಸಿದಂತೆ ಕಾರ್ಯಾದೇಶ ನೀಡಿದ್ದು, ಶೀಘ್ರವಾಗಿ ದೂರಿಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದು, ಇದರಿಂದಾಗಿ ಭಾಗಶಃ ನಿವಾರಣೆಯಾಗುವುದಾಗಿ ಹಾಗೂ ಈಗಾಗಲೇ ತಿಳಿಸಿರುವಂತೆ ಸಕ್ಷಮ ಪ್ರಾಧಿಕಾರಕ್ಕೆ ಈಗಿರುವ / ಹೆಚ್ಚಾಗಿರುವ ಮನೆಗಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚಿನ ಆಟೋ ಟಿಪ್ಪರ್‌ಗಳನ್ನು ಅನುಮೋದನೆಯಾದ ನಂತರ ಪೂರ್ಣವಾಗಿ ದಿನ ನಿತ್ಯ ಮನೆ ಮನೆಯಿಂದ ಘನ ತ್ಯಾಜ್ಯ ಸಂಗ್ರಹಣೆ ಮಾಡುವುದಾಗಿ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಎನ್‌ಜಿ.ಇ.ಎಫ್ ಬಡಾವಣೆ / 1ನೇ ಬಡಾವಣೆ/ನೃಪತುಂಗ ನಗರದ ಆರ್.ಡಬ್ಲ್ಯೂ.ಎ ಅಧ್ಯಕ್ಷರು/ ಸದಸ್ಯರುಗಳು/ ನಿಮ್ಮ ಸಮಸ್ಯೆ ನಮಗೆ ಬೇಕಾಗಿಲ್ಲ ಕನಿಷ್ಠ ಪಕ್ಷ ವಾರಕ್ಕೆ ಮೂರು ಬಾರಿಯಾದರೂ ಎಲ್ಲಾ ರಸ್ತೆಯಲ್ಲಿನ ಮನೆಗಳಿಂದ ತ್ಯಾಜ್ಯ (ಹಸಿ/ಒಣ ಕಸ )ಸಂಗ್ರಹಣೆಯಾಗಬೇಕೆಂದು ಒತ್ತಾಯಿಸಿದರು, ಅದಕ್ಕೆ ಪ್ರತಿಕ್ರಿಯೆಯಾಗಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ರವರು ಪರಿಶೀಲಿಸಿ ಅಗತ್ಯ ಕ್ರಮ

ವಹಿಸುವುದಾಗಿ ತಿಳಿಸಿದರು. ಹಾಗೂ ಅದರಂತೆ ಕೈಗೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ತಪ್ಪದೆ ತಿಳಿಸಬೇಕೆಂದು ಸದರಿಯವರಿಗೆ ಸೂಚಿಸಲಾಯಿತು.

ಕ್ರಮ :- ಕಿರಿಯ ಆರೋಗ್ಯ ಪರಿವೀಕ್ಷಕರು/ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ)

- ಜಿಯಾಲಜಿ ಬಡಾವಣೆ ನಿವಾಸಿಯಾದ ಶ್ರೀ ಮಂಜುನಾಥ್ ರವರು ಕುವೆಂಪು ಪಾರ್ಕ್ ಸುತ್ತಮುತ್ತ ಬೀದಿ ದೀಪಗಳು ಬೆಳಗುತ್ತಿಲ್ಲವೆಂದು ದೂರಿದರು.

  ಕ್ರಮ: ಸಹಾಯಕ ಅಭಿಯಂತರರು (ವಿದ್ಯುತ್)

- ಬೆಸ್ಕಾಂ ಇಲಾಖೆಯ ವತಿಯಿಂದ, ಮರಕ್ಕೆ ತಗುಲುವ ಸಂಭವವಿರುವ ವಿದ್ಯುತ್ ಲೈನ್ ಕೆಳಗಿರುವ ಮರದ ರೆಂಬೆಗಳನ್ನು ತೆರವುಗೊಳಿಸಿದ ನಂತರ ಸರಿಯಾಗಿ ವಿಲೇವಾರಿ ಮಾಡುವಂತೆ ಕೋರಲಾಯಿತು. ಕ್ರಮ: ಸಹಾಯಕ/ಕಿರಿಯ ಅಭಿಯಂತರರು, ಬೆಸ್ಕಾಂ

- 4ನೇ ಮುಖ್ಯರಸ್ತೆ, 14ನೇ ಬ್ಲಾಕ್ ನಾಗರಬಾವಿ 2ನೇ ಹಂತ, ಜಿಯಾಲಜಿ ಬಡಾವಣೆ ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆ ಮಟ್ಟದಲ್ಲಿರದ ಮ್ಯಾನ್ ಹೋಲ್ ಗಳನ್ನು ಸರಿಪಡಿಸುವಂತೆ (Levelling) ಕೋರಿದರು. ಕ್ರಮ: ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

- ರಸ್ತೆ ಗುಂಡಿಗಳನ್ನು (Pot holes & Road cutting) ತುರ್ತಾಗಿ ಮುಚ್ಚಲು ಕ್ರಮ ವಹಿಸುವಂತೆ ಮಾನ್ಯ ಆಯುಕ್ತರು ನಿರ್ದೇಶಿಸಿದ್ದು, ತುರ್ತಾಗಿ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ವಹಿಸುವಂತೆ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು. ಕ್ರಮ: ಸಹಾಯಕ ಅಭಿಯಂತರರು, ವಾರ್ಡ್-129.

- ಸಹಾಯ ಆಪ್ ನಲ್ಲಿ ದಾಖಲಾಗಿರುವ ದೂರುಗಳಿಗೆ ಸಂಬಂಧಿಸಿದಂತೆ ಎಲ್ಲಾ ವಿಭಾಗದ ಅಧಿಕಾರಿಗಳು ಕಡ್ಡಾಯವಾಗಿ ಸ್ಥಳ ಪರಿಶೀಲಿಸಿ ಆದ್ಯತೆಯ ಮೇರೆಗೆ ಪರಿಹರಿಸಲು ಹಾಗೂ ಈ ಬಗ್ಗೆ ಮುಂದಿನ ಸಭೆಯಲ್ಲಿ ವರದಿ ಮಂಡಿಸಲು ಸೂಚಿಸಲಾಯಿತು.

-Sd-
ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129

*ಪ್ರತಿಯನ್ನು:*

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾಜಾನಗರ ವಲಯ ರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾಜಾನಗರ ವಲಯ ರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾಜಾನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ ಮಾಹಿತಿಗಾಗಿ.
7. ಕಛೇರಿ ಪ್ರತಿ